ಶ್ರೀ ಎ.ಟಿ. ರಾಮಸ್ವಾಮಿ : ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಲಿಕ್ಕೆ ಆದೇಶ ಕೊಟ್ಟಿದ್ದೇವೆ. ತಾತ್ಕಾಲಿಕವಾಗಿ ಎಂದು ಹೇಳಿದರು. ಅಲ್ಲಿ ಲೋಕಲ್ ಆಗಿ ಸಿಗತಕ್ಕಂತವರನ್ನು ವಾಣಿಜ್ಯ, ಸೈನ್ಸ್ ಟೀಚರ್ ಎಂದು ನೇಮಕ ಮಾಡಿಕೊಂಡರೆ ಅಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮವಾದ ಬೋಧನೆ ದೊರೆಯುತ್ತದೆಯೇ ಹೇಳಿ. ನೀವು ಎಲ್ಲಿಂದಲಾದರೂ ಕೊಡಿ. ನಿಮಗೆ ಸಾರ್ವಜನಿಕ ಹಿತಾಸಕ್ತಿ ಇದ್ದರೆ ನಗರ ಪ್ರದೇಶದಲ್ಲಿರತಕ್ಕಂತಹ ಉಪನ್ಯಾಸಕರನ್ನು ಗ್ರಾಮಾಂತರ ಪ್ರದೇಶಕ್ಕೆ ತುಂಬಿ. ಅದು ಸಾರ್ವಜನಿಕ ಹಿತಾಸಕ್ತಿ. ವೈಯಕ್ತಿಕ ಹಿತಾಸಕ್ತಿಗೆ ಮಣೆದರೆ ನಿಮಗೆ ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಲೋಕಸೇವಾ ಆಯೋಗದ್ದು ತಮಗೆ ಗೊತ್ತಿದೆ. ತಕ್ಷಣ ಕ್ಕೇನಾದರೂ ವ್ಯವಸ್ಥೆ ಮಾಡಿಕೊಡುತ್ತೀರೋ?

ಶ್ರೀ ಡಿ. ಮಂಜುನಾಥ : ರಾಮಸ್ವಾಮಿಯವರಿಗೇನು ಕಳಕಳಿ ಇದೆ ಅವರಿಗಿಂತ ಹೆಚ್ಚು ಕಳಕಳಿ ನನಗೆ ಇದೆ. ನಗರಗಳಲ್ಲಿ ಇರುವವರನ್ನು ಗ್ರಾಮಾಂತರ ಪ್ರದೇಶಕ್ಕೆ ವರ್ಗ ಮಾಡಿ ನಮಗೆ ಬಹಳ ತೊಂದರೆಯಾಗಿದೆ. ಅವರು ಅಲ್ಲಿಗೆ ಹೋಗುವುದಿಲ್ಲ. ಶಾಸಕರಿಂದ ಒತ್ತಡ ತರುತ್ತಾರೆ. ಆದರೂ ಸಹ ಅಲ್ಲಿನ ತೊಂದರೆಯನ್ನು ನಾನು ದೂರವಾಣಿ ಮಾಡಿ ತಿಳಿದುಕೊಂಡಿದ್ದೇನೆ. ಕೆ.ಪಿ.ಎಸ್.ಸಿ.ಯಲ್ಲಿ ಪಟ್ಟಿ ಈಗ ರೆಡಿ ಇದೆ. ಅದು ಬಂದರೆ ಜಾಗ್ರತೆ ತುಂಬುತ್ತೇವೆ. ಇಲ್ಲದಿದ್ದರೆ ನಗರಪ್ರದೇಶದಲ್ಲಿರುವ ಕೆಲವರನ್ನು ಅಲ್ಲಿಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಒಂದು ಸಮಯ ನಿಗದಿ ಮಾಡಿ. ಎಷ್ಟು ದಿವಸದಲ್ಲಿ ಈ ಸ್ಟಾಫ್‌ನ್ನು ಕೊಡುತ್ತೇವೆಂದು ಹೇಳಿ. ಎಷ್ಟು ದಿವಸದಲ್ಲಿ ಈ ಉಪನ್ಯಾಸಕರನ್ನು ಹಾಕುತ್ತೀರಿ ಎಂಬ ಬಗ್ಗೆ ಸಮಯ ತಿಳಿಸಿ. ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರತಕ್ಕಂತಹ ಎಲ್ಲಾ ಕಾಲೇಜು ಗಳಲ್ಲಿ ಖಾಲಿ ಇರುವ ಹುದ್ದೆಗಳು ಬಹಳ ಇವೆ. ತಾವು ಸ್ಪೆಸ್ಪಿಫಿಕ್ ಆಗಿ ಎಷ್ಟು ದಿವಸಗಳಲ್ಲಿ ಉಪನ್ಯಾಸಕರನ್ನು ಕೊಡುತ್ತೀರಿ ಎಂಬ ಬಗ್ಗೆ ತಿಳಿಸಿ.

ಶ್ರೀ ಡಿ. ಮಂಜುನಾಥ್ : ಇಷ್ಟೇ ದಿವಸದಲ್ಲಿ ಕೊಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ನನಗೂ ಗೊತ್ತಿದೆ. ಎಲ್ಲೆಲ್ಲಿ ತೊಂದರೆ ಇದೆ ಎಂದು ಮಾಹಿತಿ ತರಿಸಿಕೊಂಡಿದ್ದೇನೆ. ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪಿ.ಎನ್.ಸಿ.ಯಲ್ಲಿ ಲಿಸ್ಟ್ ರೆಡಿ ಇದೆ. ವೆರಿಫಿಕೇಶನ್ ಕೆಲಸ ಮಾತ್ರ ಆಗಬೇಕಾಗಿದೆ. ಅದಾದ ತಕ್ಷಣ ಮೊದಲು ಗ್ರಾಮಾಂತರ ಪ್ರದೇಶಕ್ಕೆ ತುಂಬುವುದು. ಸಿಟಿಗಳಲ್ಲಿ ಹಾಕುವುದೇ ಇಲ್ಲ. ಆ ಎಲ್ಲಾ ಲಿಸ್ಟ್ ಬಂದ ಮೇಲೆ ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸುವುದು.

ಭಟ್ಕಳ ಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ

101 - ಡಾ. ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರಾಥಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ವಿಧಾನ ಸಭಾ ಕ್ಷೇತ್ರದ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿವೆ. ಇವುಗಳಲ್ಲಿರುವ ಒಟ್ಟು ಸಂಖ್ಯೆ ಎಷ್ಟು?

ಆ) ಈ ಶಾಲೆಗಳಲ್ಲಿ ಕೆಲಸ ಮಾಡುವ ಸರ್ಕಾರಿ ಶಿಕ್ಷಕರ ಸಂಖ್ಯೆ ಎಷ್ಟು? ಶಿಕ್ಷಕರ ಸಂಖ್ಯೆ ಕೊರತೆಯಿದ್ದಲ್ಲಿ ಈ ಕೊರತೆಯನ್ನು ಪೂರೈಸುವ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ

ಭಟ್ಕಳ ತಾಲ್ಲೂಕು	ಹೊನ್ನಾವರ ತಾಲ್ಲೂಕು
125	223

ಆ) ಒಟ್ಟು ವಿದ್ಯಾರ್ಥಿಗಳ ಸಂಖ್ಯೆ : 52 , 586

ಅ) ಶಿಕ್ಷಕರ ಸಂಖ್ಯೆ - 1,042

ಆ) ಕೊರತೆ - 138

ಶಿಕ್ಷಕರ ಸಂಖ್ಯೆ ಕೊರತೆ ಇರುತ್ತದೆ. ಸರ್ಕಾರವ 294 ಹೆಚ್ಚುವರಿ ಶಿಕ್ಷಕರ ಹುದ್ದೆಯನ್ನು 1994-95ನೇ ಸಾಲಿಗೆ ಉತ್ತರ ಕನ್ನಡ ಜಿಲ್ಲೆಗೆ ಮಂಜೂರು ಮಾಡಿದೆ. ಮತ್ತು 5 ಮತ್ತು 6ನೇ ಹಂತದ ಕಷ್ಟಹಲಗೆ ಕಾರ್ಯಾಚರಣೆ ಯೋಜನೆಯಡಿಯಲ್ಲಿ ಕ್ರಮವಾಗಿ 51 ಮತ್ತು 22 ಶಿಕ್ಷಕರ ಹುದ್ದೆ ಮಂಜೂರು ಮಾಡಿದೆ. ಈ ಹುದ್ದೆಗಳಿಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಕೊರತೆಯಿರುವ ಶಾಲೆಗಳನ್ನು ಗುರ್ತಿಸಿ ಆದ್ಯತೆ ಮೇರೆಗೆ ಶಿಕ್ಷಕರನ್ನು ನೇಮಿಸಿ ಶಿಕ್ಷಕರ ಕೊರತೆಯನ್ನು ನಿವಾರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಡಾ॥ಯು. ಚಿತ್ತರಂಜನ : ಒಂದೆರಡು ಸಣ್ಣ ವಿಷಯಗಳನ್ನು ಕೇಳಬೇಕಾಗಿದೆ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 52,582 ವಿದ್ಯಾರ್ಥಿಗಳು ಇದ್ದಾರೆಂದು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಜೊತೆಗೆ 138 ಕೊರತೆ ಇದೆ ಎಂದು ಹೇಳಿದ್ದಾರೆ. ಇದರಲ್ಲಿ ಮಾನ್ಯ ಮಂತ್ರಿಗಳು ಗಮನಿಸಬೇಕಾದ ಒಂದೆರಡು ವಿಷಯವನ್ನು ಮಾತ್ರ ಹೇಳುತ್ತೇನೆ. ಶಿರಾಳಿಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರಿವೆ ಕೋಡಿಯಲ್ಲಿ 558 ಜನ ವಿದ್ಯಾರ್ಥಿಗಳು ಇದ್ದಾರೆ 7 ಜನ ಶಿಕ್ಷಕರಿದ್ದಾರೆ. ಸುಮಾರು 600 ರಷ್ಟು ವಿದ್ಯಾರ್ಥಿಗಳು ಇರುವಲ್ಲಿ 7 ಜನ ಶಿಕ್ಷಕರಿದ್ದಾರೆ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಾಲಿ ಯಲ್ಲಿ 402 ವಿದ್ಯಾರ್ಥಿಗಳು ಇದ್ದಾರೆ 4 ಜನ ಶಿಕ್ಷಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊನ್ನೆಮಡಿಯಲ್ಲಿ , ಭಟ್ಕಳ ತಾಲ್ಲೂಕು, 204 ವಿದ್ಯಾರ್ಥಿಗಳಿದ್ದಾರೆ 2 ಶಿಕ್ಷಕರಿದ್ದಾರೆ. ಆ ಅಸಮತೋಲನವನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಜೊತೆಗೆ ತಾವು ಹೇಳುತ್ತಿದ್ದಿರಿ ಇಡೀ ಜಿಲ್ಲೆಗೆ 294 ಶಿಕ್ಷಕರನ್ನು ತುಂಬುವಂತಹ ಯೋಜನೆ ಇದೆ ಎಂದು. ಭಟ್ಕಳ ವಿಧಾನ ಸಭಾ ಕ್ಷೇತ್ರಕ್ಕೆ 138 ಕೊರತೆ ಇದೆ ಎಂದು ತಾವೇ ಹೇಳಿದ್ದೀರಿ. ಇದನ್ನು ಹೇಗೆ ತುಂಬಿಸಲಿಕ್ಕೆ ಯೋಜನೆ ಮಾಡಿದ್ದೀರಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಸದಸ್ಯರು ಉಪಾಧ್ಯಾಯರುಗಳ ಕೊರತೆ ಬಗ್ಗೆ ಏನು ಹೇಳುತ್ತಿದ್ದಾರೆ ಅದು ನಿಜವಾದ ವಿಷಯ. ಇದರ ಅನುಭವ ನನಗೂ ಇದೆ. ಅದು ಶಾಸಕರಿಗೂ ಗೊತ್ತಿದೆ. ಉಪಾಧ್ಯಾಯರುಗಳ ಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಸಂಖ್ಯೆ ಏನು ಇದೆ ಆ ಅನುಪಾತಕ್ಕೆತಕ್ಕಂತೆ ಇಲ್ಲ. ಅದು ತಮಗೂ ತಿಳಿದಿದೆ. ಇದರಿಂದ ಅಲ್ಲಿನ ಮಕ್ಕಳಿಗೆ ತೊಂದರೆಯಾಗಿರುವುದನ್ನು ಸರಕಾರ ಮನಗಂಡು 18,700 ಉಪಾಧ್ಯಾಯರುಗಳನ್ನು ಕೂಡಲೇ ನೇಮಕ ಮಾಡತಕ್ಕಂತಹ ವ್ಯವಸ್ಥೆ ಈಗ ಮಾಡಿದ್ದೇವೆ. ರಾಜ್ಯದಲ್ಲಿ ಎಲ್ಲೆಲ್ಲಿ ಉಪಾಧ್ಯಾಯರುಗಳು ಕಡಿಮೆ ಇದ್ದಾರೆ ಅಲ್ಲೆಲ್ಲಾ ತುಂಬತಕ್ಕಂತಹ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸ್ನೇಹಿತರೇನು ಹೇಳಿದ್ದಾರೆ ಆ ಕಡೆಗೆ ಕೂಡಲೇ ಈ ಕಡಿಮೆ ಇರತಕ್ಕಂತಹ ಉಪಾಧ್ಯಾಯರುಗಳನ್ನು ನೇಮಕ ಮಾಡುವ ಕೆಲಸ ಈಗಾಗಲೇ ನಡೆಯುತ್ತಿದೆ. ಸದ್ಯದಲ್ಲೇ ಆ ತೀರ್ಮಾನ ಕೈಗೊಳ್ಳುತ್ತೇನೆ.

ಡಾ|| ಯು. ಚಿತ್ತರಂಜನ : ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಅಪಾರ ಗೌರವ ಇದೆ. 18,000 ಶಿಕ್ಷಕರನ್ನು ನೇಮಕಾತಿ ಮಾಡುತ್ತೇವೆಂದು 6 ತಿಂಗಳಿಂದ ಹೇಳುತ್ತಿದ್ದಾರೆ. 7ನೇ ತಿಂಗಳು ಬಂತು. 294 ಶಿಕ್ಷಕರನ್ನು ಉತ್ತರ ಕನ್ನಡ ಜಿಲ್ಲೆಗೆ ಒದಗಿಸುತ್ತೇವೆಂದು ಹೇಳಿದ್ದೀರಿ. 18400 ಶಿಕ್ಷಕರಲ್ಲಿ ನಮ್ಮ ಜಿಲ್ಲೆಗೆ ಬರುವುದು ಅಷ್ಟೇನಾ. ಇಲ್ಲವೇ ಸುಮ್ಮನೇ ಪ್ರಚಾರಕ್ಕೋಸ್ಕರ ಹೇಳುವಂತಹ ವಿಷಯವೇ?

ಶ್ರೀ ಯು.ಆರ್. ಚಿತ್ತರಂಜನ್ : 18400ರಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟು ಶಿಕ್ಷಕರನ್ನು ನೇಮಕ ಮಾಡುತ್ತಿದ್ದೀರಿ ? ಇದು ಒಂದು. ಎರಡನೆಯದು, ನೀವು ಕೇವಲ ನೇಮಕ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ ಆದರೆ ಅದಕ್ಕೆ ಯಾವ ಕ್ರಮವನ್ನು ಅನುಸರಿಸಿದ್ದೀರಿ? ಯಾವ ಕ್ರಮವನ್ನು ಅನುಸರಿಸುತ್ತಿದ್ದೀರಿ? ಯಾವ ಆಜ್ಞೆಯನ್ನು ಹೊರಡಿಸಿ ನಮಗೆ ಗೊತ್ತಿಲ್ಲ, ಹೈಕೋರ್ಟಿನವರು ತಡೆಯಾಜ್ಞೆ ಕೊಟ್ಟರು, ನಾವೇನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಕುಳಿತುಕೊಳ್ಳುವ ಕೆಲಸವನ್ನು ಮಾಡಿದ್ದೀರಿ? ಇದರ ಬಗ್ಗೆ ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಹೈಕೋರ್ಟಿನವರು ಪ್ರವೇಶ ಮಾಡಿಲ್ಲ. ಯಾವುದೇ ರೀತಿಯಿಂದ ಹೈಕೋರ್ಟಿನಿಂದ ಇದಕ್ಕೆ ಮಾಡಬೇಡಿ ಎಂದು ಹೇಳಿ ಆದೇಶ ಏನೂ ಬಂದಿಲ್ಲ. ಇದರ ಅವಶ್ಯಕತೆ ತುಂಬಾ ಇರುವುದರಿಂದ ಅದಷ್ಟು ಜಾಗ್ರತೆಯಾಗಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕು ಎಂದು ಹೇಳಿ ಸರ್ಕಾರದವರು ಯೋಚನೆ ಮಾಡುತ್ತಿದ್ದೇವೆ. ಅದಷ್ಟು ಜಾಗ್ರತೆಯಾಗಿ ಮಾಡುತ್ತೇವೆ. ಮಾತನಾಡುವಾಗ ಮಂತ್ರಿಗಳು ಅದಷ್ಟು ಜಾಗ್ರತೆಯಾಗಿ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಈ ರೀತಿ ಉತ್ತರ ಕೊಡುತ್ತಾರೆಂದು ತಾವೇನು ದಯವಿಟ್ಟು ತಿಳಿದುಕೊಳ್ಳಬೇಡಿ. ಇದರ ಬಗ್ಗೆ ಚಿಂತೆ ಮಾಡಬೇಡಿ. ನಾವು ಅವಶ್ಯಕವಾಗಿ ಮಾಡುತ್ತೇವೆ. ಆಮೇಲೆ ತಾವೇನು ಹೇಳಿದ್ದೀರಿ ಜಿಲ್ಲೆಗೆ ಎಷ್ಟೆಷ್ಟು ಕಳುಹಿಸುತ್ತೀರಿ ಎಂದು, 18,700 ಉಪಾಧ್ಯಾಯರುಗಳನ್ನು ಏನು ನೇಮಕ ಮಾಡುತ್ತಿದ್ದೇವೆ, ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅವಶ್ಯಕತೆಗಳಿವೆ, ಅದನ್ನು ನೋಡಿಕೊಂಡು ಈ 18,700 ಉಪಾಧ್ಯಾಯರುಗಳನ್ನು ನೇಮಕ ಮಾಡುವ ವ್ಯವಸ್ಥೆ ಮಾಡುತ್ತೇವೆ ಎಂದು ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಯು.ಆರ್. ಚಿತ್ತರಂಜನ : ಇದನ್ನು ಯಾವಾಗ ಮಾಡುತ್ತೀರಿ?

ಶ್ರೀ ಹೆಚ್. ಶಿವಪ್ಪ : ಕಳೆದ ಆರು ತಿಂಗಳಿಂದ ಮಾಡುತ್ತೇವೆ, ಬರುವ ತಿಂಗಳು ಮಾಡುತ್ತೇವೆ, ಇನ್ನೊಂದು ತಿಂಗಳಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ನಿರ್ದಿಷ್ಟವಾಗಿ ಯಾವುದೇ ಇಂಥಹ ಟೈಂನಲ್ಲಿ ಮಾಡುತ್ತೇವೆ ಎಂದು ಟೈಮ್ ಬೌಂಡ್ ರೀತಿಯಲ್ಲಿ ಏನೂ ಮಾಡುತ್ತಿಲ್ಲ, ನಮ್ಮ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ದಯವಿಟ್ಟು ಇಷ್ಟು ಸಮಯದೊಳಗೆ ನಿರ್ದಿಷ್ಟವಾಗಿ ನಾವು 18,700 ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇವೆ ಎಂದು ಹೇಳಿ ಸ್ಪಷ್ಟ ಉತ್ತರವನ್ನು ಕೊಟ್ಟರೆ ಕರ್ನಾಟಕ ರಾಜ್ಯದ ಎಲ್ಲಾ ಜನತೆ ಉಪಾಧ್ಯಾಯರುಗಳು ಇಲ್ಲದೆ ತಂದೆತಾಯಿಗಳ ಅವರ ಚಿಂತೆ ಎಲ್ಲಾ ದೂರ ಹೋಗುತ್ತದೆ. ದಯವಿಟ್ಟು ಅವರು ಒಂದು ನಿರ್ದಿಷ್ಟ ದಿನಾಂಕವನ್ನು ಹೇಳಬೇಕು ಎಂದು ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಬಹಳ ಮಹತ್ತರವಾದ ಪ್ರಶ್ನೆಯಾಗಿದೆ ಇದು. ಈಗ ನಮಗೆ ಶಾಲೆಗಳು ಪ್ರಾರಂಭವಾಗಿ ಮೂರು ತಿಂಗಳಾಗಿದೆ ಹೆಚ್ಚು ಕಡಿಮೆ. ಐವತ್ತು ಮಕ್ಕಳಿಗೆ ಒಬ್ಬರು ಮಾಸ್ಟರ್‌ರಂತೆ ಪ್ರಾಥಮಿಕ ಶಾಲೆಗೆ ಮತ್ತು ಮಾಧ್ಯಮಿಕ ಶಾಲೆಗೆ ಕೊಡಬೇಕು. ಎಷ್ಟೋ ಕಡೆ 400 ಮಕ್ಕಳು, 300 ಮಕ್ಕಳು ಇರುವ ಕಡೆಗೆ ಎರಡು ಮೂವರು ಉಪಾಧ್ಯಾಯರು ಇರುವ ಹಾಗೆ ಹಳ್ಳಿಗಳಲ್ಲಿ ನಾವು ನೋಡುತ್ತಿದ್ದೇವೆ. ಆದರೆ ನಮ್ಮ ಸರ್ಕಾರ ಈಗಾಗಲೇ 18,700 ಶಿಕ್ಷಕರನ್ನು ನೇಮಕ ಮಾಡುತ್ತೇವೆ ಎಂದು ಕ್ರಮ ತೆಗೆದುಕೊಂಡಿದೆ, ಯಾವಾಗ ಮಾಡುತ್ತೀರಿ? ಎಷ್ಟು ದಿವಸದಲ್ಲಿ ಎಂದು ಟೈಮ್ ಬೌಂಡ ಪ್ರೋಗ್ರಾಮ್ ಕೊಡದೇ ಹೋದರೆ ಈ ಅಧಿಕಾರಿಗಳು ಮಾಡುವುದಿಲ್ಲ. ತಾವು ಕಟ್ಟುನಿಟ್ಟಾಗಿ ಈ ಸದನದ ಮುಖಾಂತರ ನಿಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಎಷ್ಟು ದಿವಸದಲ್ಲಿ ಮಾಡುತ್ತೀರಿ? ಯಾವಾಗ ಈ ಕ್ರಮವನ್ನು ಮುಗಿಸುತ್ತೀರಿ? ಅವರು ಎಷ್ಟು ದಿವಸದಲ್ಲಿ ಸರ್ಟಿಫಿಕೇಟ್ ಎಲ್ಲಾ ವೆರಿಫಿಕೇಶನ್ ಆಗಿ ಡ್ಯೂಟಿಗೆ ಹೋಗುವುದಕ್ಕೆ ತಾವು ಆದೇಶ ಕೊಡುತ್ತೀರಿ ಎನ್ನುವುದು ಒಂದು. ಇಲ್ಲಿ ತಿಳಿಸಿದರೆ ಎಲ್ಲಾ ಜನರಿಗೂ ಅರ್ಥವಾಗುತ್ತದೆ ಮತ್ತು ಪೋಷಕರಿಗೂ ಅರ್ಥವಾಗುತ್ತದೆ ಎಂದು ತಮ್ಮಲ್ಲಿ ಮನವಿ ಎರಡನೆಯದು ಒಂದೊಂದು ಜಿಲ್ಲೆಯಲ್ಲಿ ಈ ಸ್ಯಾಂಕ್ಷನ್ ಪೋಸ್ಟ್‌ಗೆ ಮಾತ್ರ ಕೊಡುತ್ತಿದ್ದೀರಿ. ಉದಾಹರಣೆಗೆ ನಮ್ಮಮಂಡ್ಯ ಜಿಲ್ಲೆಅಲ್ಲಿ, 190-195 ಸ್ಯಾಂಕ್ಷನ್ಡ್ ಪೋಸ್ಟ್ ಇವೆ. ಅಷ್ಟು ಮಾತ್ರಕ್ಕೆ ಕೊಟ್ಟರೆ ಆಗುವುದಿಲ್ಲ. ಅಲ್ಲಿ 900 ಹುದ್ದೆಗಳು ಖಾಲಿ ಇವೆ. ಸ್ಯಾಂಕ್ಷನ್ಡ್ ಪೋಸ್ಟಿಗೆ ಎಗೆನೆಸ್ಟ್ ಆಗಿ ಪೋಸ್ಟಿಂಗ್ ಮಾಡುವುದಕ್ಕಿಂತ ಜಿಲ್ಲಾವಾರು ಎಷ್ಟೆಷ್ಟು ಎಂದು ಬಹಳ ಸರಿಯಾದ ಕ್ರಮ ಇದೆ. ಅವಶ್ಯಕತೆಯನ್ನು ತರಿಸಿಕೊಂಡು ಮಕ್ಕಳ ಸಂಖ್ಯೆಯನ್ನು ತರಿಸಿಕೊಂಡು ಒಂದು ನಾರ್ಮ್ಸ್‌ನ್ನು ಹಾಕಿಕೊಂಡು ಅದಕ್ಕೆ 50 ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ನೀವು ಕೊಟ್ಟರೆ ಇಡೀ ರಾಜ್ಯದಲ್ಲಿ ದೊಡ್ಡ ಕೆಲಸ ಮಾಡಿದಂತಾಗುತ್ತದೆ. ಇದನ್ನು ನಮ್ಮ ಸರ್ಕಾರ ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಮಾನ್ಯ ಉಪಾಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಶಿಕ್ಷಕರ ಕೊರತೆ ಇದೆ. ಮತ್ತು ನಾನು ಈಗಾಗಲೇ ಶ್ರೀಮಾನ್ ನಾಗೇಗೌಡರೂ ಸಹ

ಕೇಳಿದ್ದಾರೆ. ಮಾನ್ಯ ಮಂತ್ರಿಗಳು ಬಹಳ ಉತ್ತಮ ರೀತಿಯಿಂದ ಕೆಲಸ ಮಾಡುತ್ತಿದ್ದಾರೆ. ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಅದಷ್ಟು ಬೇಗನೆ ಏನು ಶಿಕ್ಷಕರ ಕೊರತೆ ಇದೆ, ಎಲ್ಲಾ ಜಿಲ್ಲೆಯಲ್ಲೂ ಕೊರತೆ ಇದೆ. ಅದರಲ್ಲೂ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಶಿಕ್ಷಕರ ಕೊರತೆ ಇದೆ. ಮತ್ತು ಇನ್ನೊಂದು ಪ್ರಶ್ನೆ ಏನೆಂದರೆ ನಮ್ಮಲ್ಲಿ ಮರಾಠಿ ಮತ್ತು ಉರ್ದು ಮೀಡಿಯಂ ಶಿಕ್ಷಕರು ಬಹಳ ಅಭಾವ ಇದೆ. ಈಗಾಗಲೇ ಅಲ್ಲಿರುವ ಜನರಿಗೆ ತೊಂದರೆಯಾಗುತ್ತಿದೆ. ಅದನ್ನು ಕೂಡ ಮುಂಬರುವಂಥ ವೇಳೆಯಲ್ಲಿ ಏನು ನೇಮಕಾತಿ ಮಾಡುತ್ತಿದ್ದೀರಿ, ಅತೀ ಜರೂರು ಈ ಕೆಲಸವನ್ನು ಮಾಡಿ ಶಿಕ್ಷಕರ ಕೊರತೆಯನ್ನು ನೀಗಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಒಟ್ಟು ರಾಜ್ಯದಲ್ಲಿ ಸ್ಯಾಂಕ್ಷನಡ್ ಪೋಸ್ಟ್ ಎಷ್ಟಿದೆ? ಆಮೇಲೆ ಅವಶ್ಯಕತೆ ಇರುವ ಹುದ್ದೆಗಳು ಎಷ್ಟಿವೆ ಎಂದು ಅದನ್ನು ದಯವಿಟ್ಟು ತಿಳಿಸುತ್ತೀರಾ? The total sanctioned posts as against 18,700 and the total requirement as ontoday?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ತಡವಾಗಿದ್ದು ಏಕೆ ಎಂದು ಮಾನ್ಯ ಸ್ನೇಹಿತರು ಕೇಳಿದ್ದಾರೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ 29 ವರ್ಷಕ್ಕೆ ಮೇಲ್ಪಟ್ಟು ಇರತಕ್ಕಂಥ ಟಿಸಿಹೆಚ್ ಆಗಿರುವ ನಿರುದ್ಯೋಗಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಒಂದು ಹೊಸ ವಿಧಾನವನ್ನು ಈ ವರ್ಷ ಅನುಷ್ಠಾನಕ್ಕೆ ತಂದಿದ್ದೇನೆ. 29 ವರ್ಷಕ್ಕೂ ಮೇಲ್ಪಟ್ಟು ಇರತಕ್ಕಂಥ ಎಂಟೂವರೆ ಸಾವಿರ ಉಪಾಧ್ಯಾಯರುಗಳು, ಒಂದೂವರೆ ಸಾವಿರ ದೈಹಿಕ ಉಪಾಧ್ಯಾಯರುಗಳು ಮತ್ತು ಬಾಕಿ ಉಳಿದಿರುವ ಎಂಟೂವರೆ ಸಾವಿರ ಹದಿನೆಂಟು ವರ್ಷಕ್ಕೆ ಮೇಲ್ಪಟ್ಟಿರತಕ್ಕಂಥವರನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಹೆಚ್. ಶಿವಪ್ಪ : ಕೆಲವು ಶಾಲೆಗಳಲ್ಲಿ.....

ಶ್ರೀ ಹೆಚ್.ಜಿ. ಗೋವಿಂದೇಗೌಡ : ಆಮೇಲೆ ಕೇಳಿ, ಎಷ್ಟು ಪ್ರಶ್ನೆಗಳನ್ನು ಬೇಕಾದರೂ ತಾವು ಕೇಳಿ. ನನಗೆ ಇದರ ಸೀರಿಯಸ್‌ನೆಸ್ ಏನು ಎಂದು ಅರ್ಥಮಾಡಿಕೊಂಡು ಹಿಂದೆಂದೂ ಮಾಡದೇ ಇರತಕ್ಕಂಥ ಹೆಚ್ಚು ಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ಈ ವರ್ಷ ನೇಮಕ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಬಹುಶಃ ತಾವೆಲ್ಲಾ ಇವನ್ನು ತುಂಬಾ ಸಂತೋಷದಿಂದ ಸ್ವೀಕರಿಸುತ್ತೀರಿ ಎಂದು ಹೇಳಿ ನಾನು ತಿಳಿದು ಕೊಂಡಿದ್ದೇನೆ. ಈಗಾಗಲೇ ಸಾಕಷ್ಟು ತಡವಾಗಿದೆ ಎನ್ನುವ ಚಿಂತೆಯೂ ನಮಗಿದೆ. ಶಾಲೆಗಳು ಪ್ರಾರಂಭವಾಗಿ ಎರಡು ತಿಂಗಳು ಮೂರು ತಿಂಗಳಾದರೂ ಉಪಾಧ್ಯಾಯರುಗಳನ್ನು ನೇಮಕ ಮಾಡಿಲ್ಲ ಎನ್ನುವ ದುಃಖ, ನಿಮ್ಮ ಜೊತೆಯಲ್ಲಿ ಆ ದುಃಖವನ್ನು ನಾನು ಹಂಚಿಕೊಳ್ಳುತ್ತೇನೆ. ಮತ್ತೆ ತಮಗೆ ಹೇಳಬೇಕೆಂದರೆ 29 ವರ್ಷದ ಮೇಲ್ಪಟ್ಟಿರತಕ್ಕಂಥ ವಯಸ್ಸಿನ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಒಂದು ಹಂತವಾಗುತ್ತದೆ. ಅದು ಬಹುಶಃ ಇನ್ನು ತಿಂಗಳೊಳಗೆ ಆಗುತ್ತದೆ. ಇದಾದಮೇಲೆ 18 ವರ್ಷದ ಮೇಲ್ಪಟ್ಟಿರತಕ್ಕಂಥವರು ಎಷ್ಟು ಜನ ಬರುತ್ತಾರೆ, ಏನು ಎಂದು ತಿಳಿದುಕೊಂಡು ಮಾಡುವಾಗ ಹೆಚ್ಚು ಎಂದರೆ ಎರಡು ತಿಂಗಳೊಳಗೆ ಮಾಡಬೇಕು ಎಂದು

ತುಂಬಾ ಆಸೆ ಇಟ್ಟುಕೊಂಡು ಚಿಂತನೆ ಮಾಡುತ್ತೀದ್ದೇವೆ. ಅಧಿಕಾರಿಗಳನ್ನು ಆಗಿಂದಾಗ್ಗೆ ಕರೆಯಿಸಲು ಕೇಳಿ ನಾನು ಹಳ್ಳಿಗಳಿಗೆ ಹೋಗುತ್ತಿದ್ದೇವೆ. ಹೋದಲ್ಲೆಲ್ಲಾ ನನ್ನ ಸ್ನೇಹಿತರುಗಳು ಏನು ಹೇಳಿದರು, 200 ಮಕ್ಕಳು ಇರುವ ಕೆಲವು ಕಡೆ ಇಬ್ಬರೂ ಇದ್ದಾರೆ. ಈ ರೀತಿ ಇರುವಾಗ ನಾನು ಮಂತ್ರಿಯಾಗಿರಬೇಕೇ ಮಾಡಿ ಎಂದು ಹೇಳುವ ಪರಿಸ್ಥಿತಿಯಲ್ಲೂ ನಾನು ಇಲ್ಲ. ಕಾನೂನು ಚೌಕಟ್ಟಿನೊಳಗೆ ಎಷ್ಟು ದಿವಸದ ಒಳಗಡೆ ಮಾಡಬಹುದು ಎನ್ನುವ ಯೋಚನೆ ಮಾಡಿ ನಿಮ್ಮ ಜೊತೆಯಲ್ಲಿ ನಾನು ಈ ಸಮಸ್ಯೆಯನ್ನು ಅರ್ಥಮಾಡಿಕೊಂಡಿದ್ದೇನೆ. ನನ್ನ ಎಲ್ಲಾ ಸ್ನೇಹಿತರುಗಳಲ್ಲಿ ಕೇಳಿಕೊಳ್ಳುತ್ತೇನೆ, ನನಗೆ ತಿಂಗಳು ಅವಕಾಶ ಕೊಡಿ. ಈ ಎರಡು ತಿಂಗಳ ಅವಕಾಶದೊಳಗೆ ನಾನು ಸಾಧಾರಣಮಟ್ಟಿಗೆ ಎಲ್ಲಾ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಹೊಸ ಶಾಲೆಗಳನ್ನು ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ಪೋಸ್ಟ್‌ನ್ನು ಸ್ಯಾಂಕ್ಷನ್ ಮಾಡುತ್ತಾರೆ. ಎರಡನೆಯದಾಗಿ ಮತ್ತೊಂದು ವಿಚಾರ ಪ್ರತಿ ಶಾಲೆಗಳಲ್ಲಿ ಕಡಿಮೆ ಎಂದರೆ ಇಬ್ಬರು ಉಪಾಧ್ಯಾಯರು ಇರಬೇಕು ಎಂಬುದು ತಮ್ಮ ಸರ್ಕಾರದ ನೀತಿ. ಆದರೆ ಬ್ಲಾಕ್‌ಬೋರ್ಡ್ ಇರುವ ಶಾಲೆಗಳಲ್ಲಿ ಮಾತ್ರ ಎರಡು ಉಪಾಧ್ಯಾಯರು ಕಡ್ಡಾಯವಾಗಿ ಇರಬೇಕು. ಉಳಿದಲ್ಲಿ ಒಬ್ಬರು ಇದ್ದರೂ ಸಾಕು ಎನ್ನುವ ಭಾವನೆಯ ಆದೇಶವನ್ನು ತಾವು ಹೊರಡಿಸಿದ್ದೀರಿ. ಈ ದ್ವಂದ್ವ ಏಕೆ ಇದರ ಬಗ್ಗೆ ತಾವು ಉತ್ತರಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಸ್ಯಾಕ್ಷನ್ಡ್ ಪೋಸ್ಟ್ ಏನು ಎಂದು ಹೇಳಿ ನನ್ನ ಸ್ನೇಹಿತರು ಯಾರೋ ಕೇಳಿದ್ದಾರೆ. ಕಳೆದ ವರ್ಷ ಸ್ಯಾಂಕ್ಷನ್ಡ್ ಪೋಸ್ಟ್ ಐದು ಸಾವಿರಕ್ಕೆ ಅಪಾಯಿಂಟ್‌ಮೆಂಟ್ ಆಗಿಲ್ಲ, ಈ ವರ್ಷ ನಾವು ಅದನ್ನೂ ಮಾಡುತ್ತೇವೆ. ಅಂದರೆ ಲೇಟಾಗಿತ್ತು. ಮಾಡಿಲ್ಲ ಎಂದರೆ ಕೆಟ್ಟ ಉದ್ದೇಶದಿಂದ ಏನೂ ಅಲ್ಲ. ಈ ವರ್ಷ ಐದು ಸಾವಿರ, ಕಳೆದ ವರ್ಷದ್ದು ಐದು ಸಾವಿರ, ಸ್ಯಾಂಕ್ಷನ್ಡ್ ಪೋಸ್ಟ್ ಹತ್ತು ಸಾವಿರ ಪೋಸ್ಟ್‌ಗಳನ್ನು ಮೊದಲು ಭರ್ತಿ ಮಾಡುತ್ತೇವೆ. ಮತ್ತು ಉಳಿದಿರುವ 8,700 ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿ ಡಿಪಿಎಪಿ ಪ್ರೋಗ್ರಾಮಗಳು ಇವೆ. ಡಿಪಿಎಸಿ ಪ್ರೋಗ್ರಾಮಗಳಿಗೆ ಉಪಾಧ್ಯಾಯರುಗಳನ್ನು ನಾವೇ ಕೊಡಬೇಕಾಗುತ್ತದೆ. ಮತ್ತು ಓಬಿಬಿ ಪ್ರೋಗ್ರಾಮಗಳಿಗೂ ನಾವೇ ಉಪಾಧ್ಯಾಯರುಗಳನ್ನು ನೇಮಕ ಮಾಡಬೇಕಾಗುತ್ತದೆ. ಈ ಎಲ್ಲಾದಕ್ಕೋಸ್ಕರ 8700 ಹೆಚ್ಚಿಗೆ ಇಟ್ಟುಕೊಂಡು ಸ್ಯಾಂಕ್ಷನ್ಡ್ ಪೋಸ್ಟ್ ಏನಿದೆ ಹತ್ತು ಸಾವಿರ, ಇದನ್ನು ಭರ್ತಿ ಮಾಡುವ ವ್ಯವಸ್ಥೆ ಮಾಡಿದ್ದೇವೆ. ಇನ್ನು ಒಂದು ವರ್ಷ, ಎರಡು ವರ್ಷದೊಳಗೆ ಈ ಒಂದು ಸಮಸ್ಯೆಗಳನ್ನು ಬಗೆಹರಿಸದಿದ್ದರೆ ನಮಗೆ ನಾಚಿಕೆಯೂ ಆಗುತ್ತದೆ ನಮಗೆ ಒಂದೊಂದು ಸಾರಿ ಹೇಳುವುದಕ್ಕೆ ಹಳ್ಳಿಗಳಲ್ಲಿ 400-300 ವಿದ್ಯಾರ್ಥಿಗಳಿದ್ದರೆ ಒಬ್ಬರು ಇಬ್ಬರು ಉಪಾಧ್ಯಾಯರು ಇದ್ದಾರೆ. ಟೌನಗಳಲ್ಲಿ 20ಕ್ಕೆ 30ಕ್ಕೆ ಒಬ್ಬೊಬ್ಬ ಉಪಾಧ್ಯಾಯರುಗಳನ್ನು ನೋಡಿದ್ದೇವೆ. ಬಹಳ ವರ್ಷದಿಂದ ಇರುವ ಒಂದು ಅಸಮಾಧಾನ. ಈ ವರ್ಷ ನಾವು ಹೆಚ್ಚಿಗೆ ಟೌನ್‌ನಲ್ಲಿ ಸಿಟಿನಲ್ಲಿ ಇರುವ ಉಪಾಧ್ಯಾಯರುಗಳನ್ನು ಹಳ್ಳಿಗಳಿಗೆ ಕಳುಹಿಸಿದ್ದೇವೆ. ಮತ್ತು ಲೀನನ್ನು ಸಹ ಷಿಫ್ಟ್ ಮಾಡಿಸಿದ್ದೇವೆ. ಲೀನ್ ಇದ್ದರೆ ಮಾತ್ರ ಏನು ಮಾಡುತ್ತಾರೆಂದರೆ ಮತ್ತೆ ರಿಟೈರ್ ಆದತಕ್ಷಣ ಇಲ್ಲಿಗೆ ಬರುವುದು, ಖಾಲಿ ಇದ್ದ ತಕ್ಷಣ ಬರುವುದು

ಇದೆ. ಗೊಂದಲವಾಗಿದೆ. ಗೊಂದಲವಾಗುವುದಕ್ಕೆ ಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಅವ್ಯವಸ್ಥೆಗಳಾಗಿದ್ದರಿಂದ ದಯವಿಟ್ಟು ಸ್ವಲ್ಪ ಅವಕಾಶ ಕೊಡಿ. ಇದರ ಬಗ್ಗೆ ಚಿಂತನೆ ಮಾಡಿ ನಾವು ನೀವೆಲ್ಲಾ ಒಟ್ಟು ಸೇರಿ ಕೆಲಸವನ್ನು ಮಾಡೋಣ.

ಶ್ರೀ ಹೆಚ್. ಶಿವಪ್ಪ : ನಿಮಗೆ ಉಪಾಧ್ಯಾಯರುಗಳೇನಾದರೂ 30 ಸಾವಿರ ಬೇಕಾಗಿದೆಯೋ? ಏಕೆಂದರೆ ಐದು ಸಾವಿರ ಬ್ಯಾಕ್‌ಲಾಗ್ ಆಯಿತು. ಈಗ ಇರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಎಷ್ಟು ಜನ ಉಪಾಧ್ಯಾಯರುಗಳು ಬೇಕಾಗಿದ್ದಾರೆ? Total requirement as on today in relation to the boys now admitted to the School ಬಗ್ಗೆ ತಿಳಿಸಿ.

12.10 ಪಿ.ಎಂ

ಶ್ರೀ ವೆಂಕಟೇಶ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಶಿಕ್ಷಕರನ್ನು ಆಯ್ಕೆ ಮಾಡಲಿಕ್ಕೆ ಕಾನೂನು ತೊಡಕು ಇದೆ ಎಂದು ಹೇಳಿದರು. ಮತ್ತೆ ಎರಡು ತಿಂಗಳ ಅವಧಿ ಬೇಕು ಎಂದು ಅವರು ಉತ್ತರ ಕೊಡುವಾಗ ಹೇಳಿದರು. ಕಾನೂನು ತೊಡಕು ಏನು ಎಂದು ಹೇಳಿ ನಮಗೆ ಅರ್ಥ ಆಗಲಿಲ್ಲ. ಏಕೆಂದರೆ 29 ವಯೋಮಿತಿ ಮೇಲ್ಪಟ್ಟವರನ್ನು ಆಯ್ಕೆ ಮಾಡುತ್ತೇವೆ ಮತ್ತು 18 ವರ್ಷ ಮೇಲ್ಪಟ್ಟವರನ್ನು ನಾವು ಆಯ್ಕೆ ಮಾಡುತ್ತೇವೆಂದು ಹೇಳಿದರು. ನೀವು ಮೆರಿಟ್ ಮೇಲೆ ಆಯ್ಕೆ ಮಾಡುವುದರಿಂದ ಕಾನೂನು ತೊಡಕು ಏನು ಬರುತ್ತದೆ ಎಂದು ದಯವಿಟ್ಟು ಹೇಳಬೇಕು.

ಶ್ರೀ ಎನ್. ರಾಜಣ್ಣ : ನನ್ನದೊಂದು ಸಣ್ಣ ಪ್ರಶ್ನೆ ಇದೆ. ಕೆಲವು ಶಾಲೆಯಲ್ಲಿ 10 ಜನ ಟೀಚರ್ಸ್ ಇರುತ್ತಾರೆ 80 ಮಕ್ಕಳು ಇರುತ್ತಾರೆ. ಒಂದು ಕೊಠಡಿಯಲ್ಲಿ ನಾಲ್ಕು ಟೀಚರ್ಸ ಪಾಠ ಹೇಳುತ್ತಿರುತ್ತಾರೆ. ಸ್ಟೂಡೆಂಟ್ಸ್ 20ರಿಂದ 30 ಇರುತ್ತಾರೆ. ಅಂತಹ ಶಾಲೆಗಳ ಪರಿಸ್ಥಿತಿ ಏನು ಮಾಡುತ್ತೀರಿ? 30 ಸ್ಟೂಡೆಂಟ್ಸ್‌ಗೆ ಇಬ್ಬರು ಟೀಚರ್ಸ್ ಇರುತ್ತಾರೆ ಅಂತಹ ಶಾಲೆಗಳಿಗೆ ಏನು ಮಾಡುತ್ತೀರಿ ಅದರ ಬಗ್ಗೆ ದಯಮಾಡಿ ನಿಮ್ಮ ಉತ್ತರ ಏನು?

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾವು ಇದನ್ನು ಅರ್ಧ ಗಂಟೆ ಚರ್ಚೆಗೆ ಹಾಕಿ ಇದು ಬಹಳ ಮಹತ್ವವಾದ ವಿಷಯವೆಂದು ಕಾಣುತ್ತದೆ.

ಉಪಾಧ್ಯಕ್ಷರು : ಇದು ಕರ್ನಾಟಕ ರಾಜ್ಯವಾದಾದ್ಯಂತ ಇರತಕ್ಕ, ದೊಡ್ಡ ಸಮಸ್ಯೆ. ಇದರಲ್ಲಿ ವಿಚಾರ ಮಾಡತಕ್ಕದ್ದು ಏನೂ ಇಲ್ಲ. ಎಲ್ಲಾ ಹಳ್ಳಿಗಳಲ್ಲಿ ಕಾಣಿಸತಕ್ಕ ವಾಸ್ತವ ಸ್ಥಿತಿ ಇದೆ. ತೀವ್ರತೆಯನ್ನು ಅರ್ಥ ಮಾಡಿಕೊಂಡು ಹೆಚ್ಚಿನ ರೀತಿ ಮಾನ್ಯ ಗೋವಿಂದೇಗೌಡರಿಂದ ನಾವು ಬಹಳ ನಿರೀಕ್ಷಣೆಯನ್ನು ಮಾಡುತ್ತಿದ್ದೇವೆ. ತೀವ್ರ ಈ ಕ್ರಮ ತೆಗೆದು ಕೊಳ್ಳಬೇಕು.

ಶ್ರೀ ವೆಂಕಟೇಶ್ : ಎರಡು ತಿಂಗಳು ಅಥವಾ ಮೂರು ತಿಂಗಳ ಅವಧಿಯಲ್ಲಿ ಮಾಡಿ.

(ಗೊಂದಲ)

ಉಪಾಧ್ಯಕ್ಷರು : ತೀವ್ರತೆಯನ್ನು ಅರ್ಥ ಮಾಡಿಕೊಂಡು ಬಹಳಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ. ಇದರ ಬಗ್ಗೆ ಯಾರಾದರೂ ಒಬ್ಬರು ಹಾಫ್ ಎನ್ ಅವರ ಡಿಸ್ಕಷನ್‌ಗೆ ಕಳುಹಿಸಿ. ಇದರ ಬಗ್ಗೆ ಇನ್ನು ಚರ್ಚೆ ಸಾಕು. ಇದನ್ನು ಮುಂದುವರಿಸುವುದು ಬೇಡ.

ಗ್ರಾಮೀಣ ಪ್ರದೇಶದ ಆರೋಗ್ಯ ಘಟಕಗಳಲ್ಲಿ ಸಿಬ್ಬಂದಿ ಕೊರತೆ.

102 - ಶ್ರೀ ಜಿ.ಬಿ. ಶಿವಕುಮಾರ್ (ನಾಗಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಾ?

ಅ) ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳಲ್ಲಿ ವೈದ್ಯರ ಸಿಬ್ಬಂದಿಯ ಹಾಗೂ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಯಾವ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೊರತೆಗಳಿವೆ?

ಇ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ವಿವರಗಳು ಪಟ್ಟಿ ಲಗತ್ತಿಸಿದೆ. ಔಷಧಿಗಳನ್ನು ವಾರ್ಷಿಕ ಅನುದಾನದಿಂದ ಪೂರೈಸಲಾಗಿದೆ.

ಇ) ವೈದ್ಯರ ಕೊರತೆಯನ್ನು ತುಂಬುವ ಸಲುವಾಗಿ ಗುತ್ತಿಗೆ ಆಧಾರವಾದ ಮೇಲೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳನ್ನು ಆಯ್ದು ನೇಮಕ ಮಾಡುವ ಬಗ್ಗೆ ಆರ್ಥಿಕ ನಿಬಂಧನೆ ತೆರವಿಗಾಗಿ ಕಾಯಲಾಗಿದೆ. ಔಷಧಿಗಳನ್ನು ವಾರ್ಷಿಕ ಅನುದಾನದಂತೆ ಪೂರೈಸಲಾಗಿದೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ ಈಗ ತಾನೇ ರಾಜ್ಯಾದ್ಯಂತ ಇರತಕ್ಕ ಸಮಸ್ಯೆಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕು ಎನ್ನುವ ರೀತಿ ತಿಳಿಸಿರಿ ಅದೇ ರೀತಿಯದ್ದೇ ಈ ಪ್ರಶ್ನೆ ಕೂಡ. ಗ್ರಾಮಾಂತರ ಪ್ರದೇಶದ ಪರಿಸ್ಥಿತಿ ಏನಾಗಿದೆ ಎಂದು ಖುದ್ದು ವೈದ್ಯರಾಗಿರತಕ್ಕ ಸಮ್ಮ ಆರೋಗ್ಯ ಸಚಿವರಿಗೆ ಗೊತ್ತಿದೆ. ಸಚಿವರು ಕೊಟ್ಟಿದ್ದಾರೆ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳಲ್ಲಿ ವೈದ್ಯರ ಸಿಬ್ಬಂದಿಯ ಹಾಗೂ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರ ಬಂದಿದೆ ಎಂದು ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆ ಮಂಡ್ಯ ಜಿಲ್ಲೆಯಲ್ಲಿ ಯಾವ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೊರತೆಗಳಿವೆ ಎಂಬುದಕ್ಕೆ ಪಟ್ಟಿಯನ್ನು ಲಗತ್ತಿಸಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳು ಯಾವುವು? ಅವರು ಕೊಟ್ಟಿರತಕ್ಕ ಉತ್ತರದಿಂದ ನಾನು ತೃಪ್ತನಾಗಿದ್ದೇನೆ. ಆದರೆ ನಾನು ಒಂದು ಪತ್ರ ಇಲ್ಲಿಡುತ್ತೇನೆ ಉಪಾಧ್ಯಕ್ಷರೆ ಕೇವಲ ನನ್ನ ಮತ ಕ್ಷೇತ್ರದಲ್ಲಿ ಸಿಬ್ಬಂದಿಯವರ